# ಪೂರೈಕೆದಾರರ ಅನನುವರ್ತನೆಯನ್ನು ನಿರ್ವಹಿಸುವುದು

**ಪರಿಚಯ**

ಈ ದಾಖಲೆಯು ADM ನ ನೀತಿಗಳೊಂದಿಗೆ ಸಂಭವನೀಯ ಅನುಸರಣೆ ಇಲ್ಲದಿರುವುದನ್ನು ನಿರ್ವಹಿಸಲು ಮತ್ತು ಯಾವುದೇ ಅನುಸರಣೆ ಇಲ್ಲದಿರುವುದಕ್ಕೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಕ್ರಮ ಕೈಗೊಳ್ಳಲು ಪ್ರಕ್ರಿಯೆಯನ್ನು ರೂಪಿಸುತ್ತದೆ. ತನ್ನ ಬಾಧ್ಯತೆಗಳಿಗೆ ಅನುಗುಣವಾಗಿ ಉತ್ಪಾದಿಸಿದ ಮತ್ತು ನಿಯಂತ್ರಿಸಲ್ಪಟ್ಟ ವಸ್ತುಗಳನ್ನು ಮಾತ್ರ ಸ್ವೀಕರಿಸುವುದಾಗಿ ADM ತನ್ನ ಪೂರೈಕೆದಾರರಿಗೆ ತಿಳಿಸುತ್ತದೆ.

ಅನುಸರಣೆ ಮಾಡದಿರುವುದನ್ನು ಗುರುತಿಸಲು ಮತ್ತು ಯಾವುದೇ ಸಮಸ್ಯೆಗಳನ್ನು ದೃಢತೆಯಿಂದ ಪರಿಹರಿಸಲು ADM ನ ಬಾಧ್ಯತೆಯನ್ನು ಅದರ ಅನನುವರ್ತನೆ-ಸಂಬಂಧಿತ ನಿಯಮಾವಳಿ ಬೆಂಬಲಿಸುತ್ತದೆ. ಅದೇ ರೀತಿಯ ಬಾಧ್ಯತೆಗಳನ್ನು ADM ತನ್ನ ಪೂರೈಕೆದಾರರಿಂದ ನಿರೀಕ್ಷಿಸುತ್ತದೆ. ಅಂತಹ ನಿಯಮಾವಳಿಗಳನ್ನು ಅವರ ಸ್ವಂತ ಕಾರ್ಯಾಚರಣೆಗಳು ಮತ್ತು ಬೇರೆಯವರಿಂದ ಖರೀದಿಸಿದ ಪೂರೈಕೆಗಳನ್ನು ಒಳಗೊಂಡು ಅವರ ಇಡೀ ಪೂರೈಕೆ ಸರಪಳಿಗೆ ವಿಸ್ತರಿಸಬೇಕು.

ADM ಇನ್ನಷ್ಟು ಅನುಸರಣೆ ಇಲ್ಲದಿರುವಿಕೆಗೆ ಅವಕಾಶ ನೀಡದೆ ಅಥವಾ ಪ್ರೋತ್ಸಾಹಿಸದೆ ಅನುಸರಣೆ ಇಲ್ಲದಿರುವಿಕೆಯ ಸಮಸ್ಯೆಗಳನ್ನು ಬೇಗನೆ ಪರಿಹರಿಸುವ ಗುರಿ ಹೊಂದಿದೆ. ಅನುವರ್ತನೆ ಇಲ್ಲದಿರುವಿಕೆಗೆ ಸಂಬಂಧಿಸಿದಂತೆ ದೃಢೀಕರಿಸಬಹುದಾದ ಎಲ್ಲಾ ಆಪಾದನೆಗಳ ವಿಚಾರಣೆ ಮಾಡಲಾಗುತ್ತದೆ. ಅನುಸರಣೆ ಮಾಡದಿರುವುದು ಎಷ್ಟು ಗಂಭೀರವಾಗಿದೆ ಮತ್ತು ಪೂರೈಕೆದಾರರ ಮೇಲೆ ADM ಹೊಂದಿರುವ ಪ್ರಭಾವದ ಪ್ರಮಾಣವನ್ನಾಧರಿಸಿ ವಿಚಾರಣೆಯ ಫಲಿತಾಂಶಗಳಿಗೆ ಅನುಗುಣವಾಗಿ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ.

ADM ಸವಾಲುಗಳನ್ನು ಎದುರಿಸಲು ಮತ್ತು ಕ್ಷೇತ್ರದಲ್ಲಿ ಪರಿವರ್ತನೆ ತರಲು ಸಹಾಯ ಮಾಡುವುದಕ್ಕಾಗಿ ತನ್ನ ಪ್ರಭಾವವನ್ನು ಸಕಾರಾತ್ಮಕವಾಗಿ ಬಳಸಿಕೊಳ್ಳುವುದು ಎಡಿಎಮ್ ನ ಗುರಿಯಾಗಿದೆ. ADM ತನ್ನ ಬಾಧ್ಯತೆಗಳನ್ನು ಪೂರೈಸುವ ನಿಟ್ಟಿನಲ್ಲಿ ಮತ್ತು ನಿರಂತರ ಸುಧಾರಣೆ ಮಾಡುವುದಕ್ಕಾಗಿ ಪೂರೈಕೆದಾರರನ್ನು ತೊಡಗಿಸಿಕೊಳ್ಳುವುದು ತನ್ನ ಕಾರ್ಯಸಾಧನೆಯಲ್ಲಿ ಮೊದಲ ಹೆಜ್ಜೆಯಾಗಿರುತ್ತದೆ ಎಂದು ಎಡಿಎಮ್ ನಂಬಿಕೆಯಾಗಿದೆ.

**ಆಡಳಿತ ಮತ್ತು ನಾಯಕತ್ವ**

ದೂರುಗಳಿಗೆ ಸಂಬಂಧಿಸಿದ ಪ್ರಕರಣಗಳ ಬಗ್ಗೆ ಚರ್ಚಿಸಲು ಮತ್ತು ನಿರ್ಧಾರ ಕೈಗೊಳ್ಳಲು ಒಂದು ಆಂತರಿಕ ದೂರು ಸಮಿತಿಯನ್ನು ADM ಸ್ಥಾಪಿಸಿದೆ. ಈ ಸಮಿತಿಯು ಸುಸ್ಥಿರ ಪ್ರಕ್ರಿಯೆಗಳಲ್ಲಿ ನೈಪುಣ್ಯತೆಯುಳ್ಳವರನ್ನು ಮತ್ತು ವಾಣಿಜ್ಯ ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ ಹಾಗೂ ಸೂಕ್ತವೆನಿಸಿದಾಗ ಕಾನೂನು ಅನುಸರಣಾ ನಿಪುಣರ ಸೇವೆ ಪಡೆದುಕೊಳ್ಳುತ್ತದೆ. ಅಗತ್ಯವಿದ್ದಾಗ, ADM ನಾಯಕತ್ವವನ್ನು ನಿರ್ದಿಷ್ಟ ನಿರ್ಧಾರಗಳಲ್ಲಿ ತೊಡಗಿಸಿಕೊಳ್ಳಬಹುದು. ADM ನ ನೀತಿಗಳನ್ನು ಅನುಷ್ಠಾನಗೊಳಿಸುವಲ್ಲಿ ಅದರ ಪ್ರಗತಿಯನ್ನು ನಿಯಮಿತವಾಗಿ ನಿರ್ದೇಶಕರ ಮಂಡಳಿಗೆ ವರದಿ ಮಾಡಲಾಗುತ್ತದೆ.

**ಪೂರೈಕೆದಾರರನ್ನು ತೊಡಗಿಸಿಕೊಳ್ಳುವುದು**

ADM ತನ್ನ ನಿರೀಕ್ಷೆಗಳನ್ನು ನೇರ ಪೂರೈಕೆದಾರರಿಗೆ ತಿಳಿಸುತ್ತದೆ ಮತ್ತು ಇಡೀ ಪೂರೈಕೆ ಸರಪಳಿಯುದ್ದಕ್ಕೂ ತನ್ನ ಬಾಧ್ಯತೆಗಳನ್ನು ಪೂರೈಸಲು ಅವರ ಸಹಯೋಗ ಕೋರುತ್ತದೆ.

ತನ್ನ ಪೂರೈಕೆದಾರರು ಅನ್ವಯಿಸುವ ಕಾನೂನುಗಳನ್ನು ಪೂರ್ತಿ ಅನುಸರಿಸಬೇಕು ಮತ್ತು ಅಂತಾರಾಷ್ಟ್ರೀಯವಾಗಿ ಗುರುತಿಸಲಾದ ಪರಿಸರ ಮತ್ತು ಸಾಮಾಜಿಕ ಮಾನದಂಡಗಳಿಗೆ ಹೊಂದಿಕೊಂಡು ನಡೆಯಬೇಕು, ಜೊತೆಗೆ ತನ್ನ ಆಚಾರಸಂಹಿತೆ ಮತ್ತು ನೀತಿಗಳನ್ನು ಕೂಡ ಅನುಸರಿಸಬೇಕು ಎಂದು ADM ನಿರೀಕ್ಷಿಸುತ್ತದೆ. ಅಗತ್ಯವಿದ್ದಾಗ, ಪೂರೈಕೆದಾರರ ಸುಸ್ಥಿರತೆಯ ಕಾರ್ಯಕ್ಷಮತೆಯನ್ನು ಇನ್ನಷ್ಟು ಸುಧಾರಿಸುವುದಕ್ಕಾಗಿ ADM ಅವರೊಂದಿಗೆ ಕೈಜೋಡಿಸುತ್ತದೆ. ಸಂಸ್ಥೆಯು ಉತ್ಪಾದಕರೊಂದಿಗೆ ಅಥವಾ ಪ್ರಾಥಮಿಕ ಸಂಸ್ಕಾರಕಗಳೊಂದಿಗೆ (ಪ್ರೊಸೆಸರ್ಸ್) ದೀರ್ಘಕಾಲದ ಅಥವಾ ಪುನರಾವರ್ತಿತ ಖರೀದಿ ಸಂಬಂಧಗಳನ್ನು ನಿರ್ವಹಿಸುವಾಗ ಅನುಸರಣೆಯನ್ನು ಸಾಧಿಸುವುದಕ್ಕಾಗಿ ಈ ಪೂರೈಕೆದಾರರಿಗೆ ADM ಸಹಾಯ ನೀಡುತ್ತದೆ.

ನೇರ ಪೂರೈಕೆದಾರರು ADM ನೀತಿಗಳ ಅನುಸರಣೆಯನ್ನು ನಿರಂತರವಾಗಿ ಸ್ವಯಂ-ಮೌಲ್ಯಮಾಪನ ಮಾಡಿಕೊಳ್ಳಬೇಕೆಂದು ADM ನಿರೀಕ್ಷಿಸುತ್ತದೆ. ಸಂಗ್ರಹಣೆಯ ಒಪ್ಪಂದ ತಯಾರಿಸುವಾಗ ನೇರ ಪೂರೈಕೆದಾರರು ADM ನೀತಿಗಳ ಯಾವುದೇ ಅಂಶಕ್ಕೆ ಸಂಬಂಧಿಸಿದಂತೆ ಕಳವಳಗಳನ್ನು ತಿಳಿಸಲು ಅಥವಾ ಸ್ಪಷ್ಟೀಕರಣ ಪಡೆಯಲು ADM ಸಂಪರ್ಕ ವ್ಯಕ್ತಿಯನ್ನು ಸಂಪರ್ಕಿಸಬೇಕು. ನೇರ ಪೂರೈಕೆದಾರರು ADM ನೀತಿಗಳ ಮತ್ತು ಬಾಧ್ಯತೆಗಳ ಪ್ರಕಾರ ನಡೆದುಕೊಳ್ಳುವಂತೆ ಹಾಗೂ ಅವರ ಪೂರೈಕೆದಾರರು ಕೂಡ ಅದೇ ರೀತಿ ನಡೆದುಕೊಳ್ಳಬೇಕೆಂದು ADM ನಿರೀಕ್ಷಿಸುತ್ತದೆ. ಎ ಡಿ ಎಮ್ ಪರಿಣಾಮಕಾರಿ ಇನ್ಸೆಂಟಿವ್ ಗಳು, ಸಹಾಯಕ ತಂತ್ರಗಳು, ಮತ್ತು ಖರೀದಿ ನಿಯಂತ್ರಣ ವ್ಯವಸ್ಥೆಗಳ ಮುಖಾಂತರ ಪರೋಕ್ಷ ಪೂರೈಕೆದಾರರ ಅನುಸರಣೆಗೆ ಬೆಂಬಲ ನೀಡುವುದಕ್ಕಾಗಿ ನೇರ ಪೂರೈಕೆದಾರರ ಜತೆಗೂಡಿ ಕೆಲಸ ಮಾಡುತ್ತದೆ. ADM ನೀತಿಗಳನ್ನು ನಿಜವಾಗಿ ಉಲ್ಲಂಘಿಸಿದ್ದರೆ ಅಥವಾ ಉಲ್ಲಂಘಿಸಿರುವುದಾಗಿ ಸಂದೇಹವಿದ್ದರೆ, ತನ್ನ ನೇರ ಪೂರೈಕೆದಾರರು ಅವರ ನೇರ ಪೂರೈಕದಾರರ (ADM ನ ಪರೋಕ್ಷ ಪೂರೈಕೆದಾರರು) ಮೂಲಕ ಅನುಸರಣೆ ಸಾಧಿಸುವುದಕ್ಕಾಗಿ ಸಮಯ-ಬದ್ಧ ಅನುಷ್ಠಾನ ಯೋಜನೆಯನ್ನು ಅಭಿವೃದ್ಧಿಪಡಿಸಬೇಕು, ಅನುಷ್ಠಾನಗೊಳಿಸಬೇಕು ಮತ್ತು ನಿಗಾವಹಿಸಬೇಕು ಹಾಗೂ ನಿಯಮ ಉಲ್ಲಂಘನೆಯನ್ನು ತಪ್ಪಿಸಬೇಕು ಅಥವಾ ಅದನ್ನು ಬೇಗನೆ ಪರಿಹರಿಸಬೇಕು ಎಂದು ADM ನಿರೀಕ್ಷಿಸುತ್ತದೆ.